ಕರ್ನಾಟಕ
ಸಮಾಜವಾದಿ
ವೇದಿಕೆ

# 2020ನೇ ವರ್ಷದ ಸಂಕ್ಷಿಪ್ತ ವರದಿ ಮತ್ತು ಲೆಕ್ಕಪತ್ರದ ವಿವರಗಳು

ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಸಮಾಜವಾದಿಗಳ ಕೊಡುಗೆ ಅಪಾರವಾದುದು. ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ ನಾರಾಯಣ, ಯೂಸುಫ್ ಮೆಹರ್ ಅಲಿ, ಕಮಲಾದೇವಿ ಚಟ್ಟೋಪಾಧ್ಯಾಯ, ರಾಮ ಮನೋಹರ ಲೋಹಿಯಾ ಮುಂತಾದವರು ಸಕ್ರಿಯವಾಗಿ ಆಂದೋಲನದಲ್ಲಿ ಧುಮುಕಿದ್ದವರು. ಇಂಥ ಹೋರಾಟಗಾರರು ಮತ್ತು ಚಿಂತಕರು ರೂಪಿಸಿದ ಸಮಾಜವಾದವು ಇಂದಿಗೂ ಪ್ರಸ್ತುತವಾಗಿದೆ. ಸಮಾಜವಾದಿಗಳು ಗರಿಷ್ಠ



**ಮಾಗಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಸಂವಿಧಾನದ ಪೀಠಿಕೆಯನ್ನು ಓದುತ್ತಿರುವುದು**

**ಸಂವಿಧಾನ ಕುರಿತು ಪಾಠ ಮಾಡಿದ ಮಂಗ್ಳೂರ ವಿಜಯ ಮತ್ತು ಶಾಲೆಯ ಮೂವರು ಶಿಕ್ಷಕಿಯರನ್ನು ಚಿತ್ರದಲ್ಲಿ ಕಾಣಬಹುದು.**

ಸ್ಫೂರ್ತಿಯನ್ನು ಪಡೆದದ್ದು ಮಹಾತ್ಮಾ ಗಾಂಧಿ ಚಿಂತನೆ ಮತ್ತು ಹೋರಾಟಗಳಿಂದ.

ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಸರಿಸಮವಾಗಿ ಪ್ರತ್ಯೇಕ ಹೋರಾಟವನ್ನು ನಡೆಸಿದ ಡಾ॥ ಬಿ. ಆರ್. ಅಂಬೇಡ್ಕರ್ ಕೂಡ ಸಮಾಜವಾದಿ ತತ್ವವನ್ನೇ ತಮ್ಮ ಸಿದ್ಧಾಂತವಾಗಿ ಒಪ್ಪಿಕೊಂಡಿದ್ದರು. ಅವರು ಅದನ್ನು **'ಪ್ರಭುತ್ವ ಸಮಾಜವಾದ'** ಎಂದು ಕರೆದರು. 'ಈ ಮೂಲಕವೇ ಭಾರತೀಯರ ಸರ್ವಾಂಗೀಣ ಅಭಿವೃದ್ಧಿ' ಎಂದು ಅವರು ಘೋಷಿಸಿದರು.

ಸ್ವತಂತ್ರ ಭಾರತವು ಡಾ॥ ಅಂಬೇಡ್ಕರ್ ನೇತೃತ್ವದಲ್ಲಿ ತನಗಾಗಿ ರೂಪಿಸಿಕೊಂಡ ಸಂವಿಧಾನದ ಆಶಯ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತತ್ವಗಳ ಸಾರವಾಗಿದೆ. ಇದರೊಂದಿಗೆ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ನಮಗೆ ಮಹತ್ವದ ಧ್ಯೇಯಗಳು.

ಕರ್ನಾಟಕದಲ್ಲೂ ಸಮಾಜವಾದಿಗಳ ವಿಶೇಷ ಕೊಡುಗೆಯನ್ನು ಗುರುತಿಸ ಬಹುದು. ರಾಜಕಾರಣದಲ್ಲಿ ಮತ್ತು




**ರಾಜೇಶ್ವರಿ ಶಾಲೆಯಲ್ಲಿ ಮಕ್ಕಳೊಂದಿಗೆ ಸಂವಿಧಾನದ ಅಶಯ ಕುರಿತು ಚರ್ಚೆ. ಗಜೇಂದ್ರ, ಅನಂತಪದ್ಮನಾಭನ್ ಸುಷ್ಮಿತಾ, ಶಾಲೆ ಮುಖ್ಯ ಗುರುಗಳಾದ ರವಿಶಂಕರ್.**

ಸಾಹಿತ್ಯ-ಕಲಾ ಪ್ರಕಾರಗಳಲ್ಲಿ ಸಮಾಜವಾದಿ ಚಿಂತನೆ ಸಮ್ಮಿಶ್ರಗೊಂಡಿದೆ ನಮ್ಮ ರಾಜ್ಯದ ಶಾಂತವೇರಿ ಗೋಪಾಲಗೌಡ, ಜೆ.ಎಚ್. ಪಟೇಲ್, ಎಂ.ಪಿ ಪ್ರಕಾಶ್, ಕೋಣಂದೂರು ಲಿಂಗಪ್ಪ, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಮುಂತಾದವರು ರಾಜಕಾರಣ ಕ್ಷೇತ್ರದಲ್ಲಿ ಸಮಾಜವಾದಿ ಆಶಯವು ಸಾಕಾರಗೊಳ್ಳಲು ಕಾರಣಕರ್ತರಾದರೆ, ಕುವೆಂಪು, ಪಿ. ಲಂಕೇಶ್, ಪೂರ್ಣ ಚಂದ್ರ ತೇಜಸ್ವಿ, ಚಂದ್ರಶೇಖರ ಪಾಟೀಲ, ಕೆ. ರಾಮದಾಸ್, ದೇವನೂರ ಮಹಾದೇವ ಮುಂತಾದವರು ಸಾಹಿತ್ಯ-ಕಲಾ ಕ್ಷೇತ್ರಗಳಲ್ಲಿ ಸಮಾಜವಾದಿ ಆಶಯವು ಸಾಕಾರಗೊಳ್ಳಲು ಕಾರಣಕರ್ತರಾದರು.

ಜನಸಂಘಟನೆ, ಹೋರಾಟ, ಅನ್ಯಾಯದ ಖಂಡನೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ಮುಖ್ಯವಾಗಿ ಪ್ರೊ॥ ಎಂ.ಡಿ ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಪ್ರೊ॥ ಬಿ.ಕೃಷ್ಣಪ್ಪ, ಮುಂತಾದವರು

ಇಂದು ಸಮಾಜವಾದಿ ಆಶಯವು ಹಲವು ಚಳವಳಿಗಳ ಮೂಲಕ ಜನರನ್ನು ಸೆಳೆದುಕೊಂಡಿದೆ. ರೈತರ, ಆದಿವಾಸಿಗಳ, ಧಾರ್ಮಿಕ ಅಲ್ಪ ಸಂಖ್ಯಾತರ, ಹಿಂದುಳಿದ ವರ್ಗಗಳ, ದಲಿತರ, ಸ್ಲಂ ನಿವಾಸಿಗಳ, ಪರಿಸರ ರಕ್ಷಣೆಯ, ಅಸಂಘಟಿತ ಕಾರ್ಮಿಕರ, ಕೃಷಿ ಕೂಲಿಕಾರರ, ಗ್ರಾಮೀಣರ ಹಿತದ, ಮಾನವ ಹಕ್ಕುಗಳ ಪರವಾಗಿ ಕೇಳಿಬರುವ ಧ್ವನಿಯ ಆಶಯವು ಸಮಾಜವಾದಿ ಆಶಯವೇ ಆಗಿದೆ. ತಾವು ಸಮಾಜವಾದಿ ಆಶಯದ ಈಡೇರಿಕೆಗಾಗಿಯೇ ಹೋರಾಡುತ್ತಿರುವ ಸ್ಪಷ್ಟ ತಿಳುವಳಿಕೆಯನ್ನು ಈ ಎಲ್ಲಾ ಧ್ವನಿಗಳಿಗೆ ಮನವರಿಕೆ ಮಾಡಿಕೊಡುವ ಅವಶ್ಯಕತೆ ಇದೆ.

ಕೆಲವು ವರ್ಷಗಳಿಂದ **'ಕರ್ನಾಟಕ ಸಮಾಜವಾದಿ ವೇದಿಕೆ** ಕೆಲವೊಂದು ಚಟುವಟಿಕೆಗಳನ್ನು ಮಾಡಿಕೊಂಡು

**(3ನೇ ಪುಟ ನೋಡಿ**


# ದೇಶದ ಮತ್ತು ಕರ್ನಾಟಕದ ಕೆಲವು ಸಮಾಜವಾದಿ ನೇತಾರರು



ಶಾಂತವೇರಿ ಗೋಪಾಲಗೌಡ

ಕರ್ನಾಟಕದಲ್ಲೂ ಸಮಾಜವಾದಿಗಳಲ್ಲಿ ಶಾಂತವೇರಿ ಗೋಪಾಲಗೌಡ, ಜೆ.ಎಚ್. ಪಟೇಲ್, ಎಂ.ಪಿ. ಪ್ರಕಾಶ್, ಕೋಣಂದೂರು ಲಿಂಗಪ್ಪ, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಮುಂತಾದವರು ರಾಜಕಾರಣ ಕ್ಷೇತ್ರದಲ್ಲಿ ಹಾಗೂ ರಾಷ್ಟ್ರಕವಿ ಕುವೆಂಪು, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಪ್ರೊ॥ ಚಂದ್ರಶೇಖರ ಪಾಟೀಲ ಕೆ. ರಾಮದಾಸ್, ದೇವನೂರ ಮಹಾದೇವ ಮುಂತಾದವರು ಸಾಹಿತ್ಯ–ಕಲಾ ಕ್ಷೇತ್ರಗಳಲ್ಲಿ ಸಮಾಜವಾದಿ ಆಶಯವು ಸಾಕಾರಗೊಳ್ಳಲು ಕಾರಣಕರ್ತರಾದರು.


ಜನಸಂಘಟನೆ, ಹೋರಾಟ, ಅನ್ಯಾಯದ ಖಂಡನೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ಮುಖ್ಯವಾಗಿ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಪ್ರೊ॥ ಬಿ.ಕೃಷ್ಣಪ್ಪ, ಮುಂತಾದವರು.



ಮಹಾತ್ಮಾ ಗಾಂಧೀಜಿ



ಡಾ॥ ಬಿ.ಆರ್.ಅಂಬೇಡ್ಕರ್



ಆಚಾರ್ಯ ನರೇಂದ್ರ ದೇವ



ಜಯಪ್ರಕಾಶ ನಾರಾಯಣ



ರಾಮಮನೋಹರ ಲೋಹಿಯಾ



ಕಮಲಾದೇವಿ ಚಟ್ಟೋಪಾಧ್ಯಾಯ




ಯೂಸುಫ್ ಮೆಹರ್ ಆಲಿ



ಪ್ರೊ॥ ಮಧು ದಂಡವತೆ



ಜಾರ್ಜ್ ಫರ್ನಾಂಡಿಸ್



ಮಧು ಲಿಮಯೆ

(1ನೇ ಪುಟದಿಂದ) ಚಟುವಟಿಕೆಗಳನ್ನು ಹಲವು ಹತ್ತು ಗುಂಪುಗಳು ಸ್ವತಂತ್ರವಾಗಿ ಮಾಡುವಂತೆ ಆಗಬೇಕು. ನಂತರ, ಇಂಥ ಗುಂಪುಗಳು ಒಗ್ಗೂಡುವುದು ಅಥವಾ ಒಕ್ಕೂಟ ಮಾಡಿಕೊಳ್ಳುವ ಬಗ್ಗೆ ಚಿಂತನೆ ನಡೆಸಬಹುದಾಗಿದೆ.

ಕರ್ನಾಟಕ ಸಮಾಜವಾದಿ ವೇದಿಕೆ 2020ರಲ್ಲಿ ನಡೆಸಿದ ಚಟುವಟಿಕೆಗಳ ಬಗ್ಗೆ ಮಾಹಿತಿ ಇಲ್ಲಿದೆ. ಅನಿಸಿಕೆ–ಅಭಿಪ್ರಾಯಗಳನ್ನು ತಿಳಿಸಿ.

## ಕರ್ನಾಟಕ ಸಮಾಜವಾದಿ ವೇದಿಕೆ 2020ರಲ್ಲಿ ನಡೆಸಿದ ಚಟುವಟಿಕೆಗಳು

2020ರ ಜನವರಿ–ಫೆಬ್ರುವರಿ ಮತ್ತು ಮಾರ್ಚ್ ಮಧ್ಯ ಭಾಗದವರೆಗೆ **ಕರ್ನಾಟಕ ಸಮಾಜವಾದಿ ವೇದಿಕೆ** ವತಿಯಿಂದ ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಪಿಯು ಕಾಲೇಜ್ ಮತ್ತು ಪ್ರೌಢ ಶಾಲೆಯ ಮಕ್ಕಳಿಗೆ ಸಾಮಾನ್ಯ ಜ್ಞಾನ, ಹೊರಾಂಗಣ ಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

**ಮಾಗಡಿ** ತಾಲ್ಲೂಕು ಕೇಂದ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2ನೇ ಮತ್ತು ಅಂತಿಮ ವರ್ಷದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಒಂದೊಂದರಂತೆ **'ಸಮಾಜವಾದಿ ಶಿಬಿರ'**ವನ್ನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ಸರಾಸರಿ 70 ವಿದ್ಯಾರ್ಥಿಗಳು ಮತ್ತು 90 ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಒಟ್ಟು 260 ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ **'ಸಂವಿಧಾನ'** ಕಿರುಪುಸ್ತಕಗಳನ್ನು ವಿತರಿಸಲಾಯಿತು.

* * *

**ಬೆಂಗಳೂರಿನ** ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ **'ಸಂವಿಧಾನ ಮತ್ತು ಸಮಾಜವಾದಿ ಧ್ಯೇಯ'** ಕುರಿತು ವಿಚಾರಗೋಷ್ಠಿ ಏರ್ಪಾಟು ಮಾಡಲಾಗಿತ್ತು. ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ **ಡಾ॥ ರಾಮಲಿಂಗಪ್ಪ ಟಿ. ಬೇಗೂರು** ಮತ್ತು ಕಾಲೇಜಿನ ಪ್ರಾಂಶುಪಾಲರಾದ **ಪ್ರೊ॥ ಗವಿಯಪ್ಪ** ಸಹಕಾರ ನೀಡಿದರು. ಒಟ್ಟು 65 ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ **'ಸಂವಿಧಾನ'** ಕಿರು ಪುಸ್ತಕಗಳನ್ನು ನೀಡಲಾಯಿತು.

* * *

**ಬೆಂಗಳೂರಿನ** ವಿವಿಧ ಕಾಲೇಜುಗಳಲ್ಲಿ ಕೆಲಸ ಮಾಡುವ ಯುವ ಉಪನ್ಯಾಸಕರಿಗಾಗಿ **'ಆಧುನಿಕ ಕನ್ನಡ ಸಾಹಿತ್ಯ: ಸಮಾಜವಾದಿ ಆಶಯ'** ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು. ಸಮಾಜವಾದಿ ಚಿಂತಕ **ಡಾ॥ ನಟರಾಜ ಹುಳಿಯಾರ್** ಅವರು ಪ್ರಧಾನ ಉಪನ್ಯಾಸ ನೀಡಿದರು. ಇಲ್ಲಿ ಭಾಗವಹಿಸಿದ್ದ 18 ಯುವ ಉಪನ್ಯಾಸಕರಿಗೆ **'ಸಂವಿಧಾನ'** ಕಿರುಪುಸ್ತಕಗಳನ್ನು ವಿತರಣೆ ಮಾಡಲಾಯಿತು.

**ಬೆಂಗಳೂರಿನ** ರಾಜೇ



**ಪ್ರೌಢಶಾಲಾ ಮಕ್ಕಳಿಗೆ ಆರು ವಾರಾಂತ್ಯ ದಿನಗಳಲ್ಲಿ ನೀಡಿದ ಇಂಗ್ಲೀಷ್ ವ್ಯಾಕರಣ ಪಾಠ**

ಮಕ್ಕಳ ವಿವಿಧ ತಂಡಗಳನ್ನು (ಒಟ್ಟು ಮೂರು ತಂಡ–ಪ್ರತಿ ತಂಡದಲ್ಲಿ 14 ವಿದ್ಯಾರ್ಥಿ–ವಿದ್ಯಾರ್ಥಿನಿಯರು) **ವಿಶ್ವೇಶ್ವರಯ್ಯ ಮ್ಯೂಜಿಯಮ್**ಗೆ ಕರೆದೊಯ್ದು ವಿಜ್ಞಾನದ ಹೆಜ್ಜೆಗಳು, ವೈಜ್ಞಾನಿಕ ಮನೋಭಾವದ ಅವಶ್ಯಕತೆ, ಮೂಢನಂಬಿಕೆಗಳ ಹಾವಳಿ, ಜ್ಯೋತಿಷ್ಯದ ನಿರರ್ಥಕತೆ ಇತ್ಯಾದಿಗಳನ್ನು ಮಕ್ಕಳಿಗೆ ತಿಳಿಸಿಕೊಡಲಾಯಿತು.

* * *

ಇನ್ನೊಂದು ಕಾರ್ಯಕ್ರಮವಾಗಿ ಮಕ್ಕಳನ್ನು **ನೆಹರೂ ತಾರಾಲಯ**ಕ್ಕೆ ಕರೆದೊಯ್ದು, ಭೂಮಂಡಲದ ಪರಿಚಯ, ಗ್ರಹ ಮತ್ತು ನಕ್ಷತ್ರಗಳ ಲೋಕ, ಗ್ರಹಣ, ಹಗಲು–ರಾತ್ರಿ, ಪ್ರಪಂಚದ ವಿವಿಧ ದೇಶಗಳಲ್ಲಿ ಸಮಯ ವ್ಯತ್ಯಾಸವಾಗುವುದಕ್ಕೆ ಕಾರಣ ಇತ್ಯಾದಿಗಳನ್ನು ಮಕ್ಕಳಿಗೆ ವಿವರಿಸಲಾಯಿತು.

ಮತ್ತೊಂದು ಕಾರ್ಯಕ್ರಮವಾಗಿ ಮಕ್ಕಳನ್ನು **ಬೆಂಗಳೂರು ವಿಶ್ವವಿದ್ಯಾಲಯದ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮ್ಯೂಜಿಯಮ್**ಗೆ ಕರೆದೊಯ್ದು, ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಡಾ॥ ಬಿ. ಆರ್. ಅಂಬೇಡ್ಕರ್ ನಡೆಸಿದ ಹೋರಾಟ, ಅವರ ಜೀವನ ಮತ್ತು

**ಬೆಂಗಳೂರಿನ ರಾಜೇಶ್ವರಿ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು) ಮ್ಯೂಜಿಯಮ್‌ಗೆ ಭೇಟಿ ನೀಡಿದ್ದು**



ಸಾಧನೆ, ಸಂವಿಧಾನ ರಚನೆಯಲ್ಲಿ ಅವರ ಪಾತ್ರ, ಸಂವಿಧಾನದ ಆಶಯ ಇತ್ಯಾದಿ ಗಳನ್ನು ಮಕ್ಕಳಿಗೆ ತಿಳಿಸಿಕೊಡಲಾಯಿತು.

* * *

ಮಾರ್ಚ್ 14– 15ರಂದು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮದಲ್ಲಿ ತಾಲ್ಲೂಕಿನ ಆಸಕ್ತ ಯುವಜನರಿಗಾಗಿ **'ಸಮಾಜವಾದಿ ಶಿಬಿರ'** ನಡೆಸಲಾಯಿತು. ಇಲ್ಲಿ ಯುವಜನ ತರಬೇತುದಾರ ಕೆ.ಟಿ.ತಿಪ್ಪೇಸ್ವಾಮಿ, **ಬೆಂಗಳೂರು ದಲಿತ್ ಫೋರಮ್**‌ನ ಟಿ. ಗಜೇಂದ್ರ, ಬೆಂಗಳೂರಿನ ನ್ಯಾಯ ವಾದಿ ಎಚ್.ವಿ. ಮಂಜುನಾಥ್ ಮತ್ತು ಅವರ ಮಿತ್ರರು ಪಾಲ್ಗೊಂಡಿದ್ದರು. ತಾಲ್ಲೂಕಿನ ವಿವಿಧ ಗ್ರಾಮಗಳಿಂದ 26 ಯುವಜನರು ಭಾಗಿ ಆಗಿದ್ದರು.

* * *

ಕೋವಿಡ್‌ನಿಂದಾಗಿ ಆಫ್‌ಲೈನ್ ಕಾರ್ಯಕ್ರಮಗಳನ್ನು ಮಾರ್ಚ್ ನಂತರ ನಡೆಸಲು ಆಗಲಿಲ್ಲ.


ಈ ಹಿನ್ನೆಲೆಯಲ್ಲಿ ಆಸಕ್ತ ಮಿತ್ರರೊಂದಿಗೆ ಮಾತನಾಡಿ, ಅವರು ಪಾಲ್ಗೊಳ್ಳುವ ಭರವಸೆ ನೀಡಿದ ಪ್ರಯುಕ್ತ **ಏಪ್ರಿಲ್ 14ರಿಂದ** ಆನ್‌ಲೈನ್ ಸಭೆಯನ್ನು ಪ್ರತಿ ದಿನ ಬೆಳಗ್ಗೆ 10ರಿಂದ 11ರವರೆಗೆ ನಡೆಸಲು ಪ್ರಾರಂಭ ಮಾಡಲಾಯಿತು. ಪ್ರತಿದಿನ ಒಂದೊಂದು ವಿಷಯದ ಬಗ್ಗೆ ಮಾತನಾಡಲು ಪರಿಣತರನ್ನು ಆಹ್ವಾನಿಸಿ, ಅವರಿಂದ ವಿಷಯ ಮಂಡನೆ ಮತ್ತು ನಂತರ ಎಲ್ಲಾ ಮಿತ್ರರಿಂದ ಪ್ರತಿಕ್ರಿಯೆ ಆಹ್ವಾನಿಸುವ ಕಾರ್ಯಕ್ರಮ ಇದು. ಈ ಕಾರ್ಯಕ್ರಮದಲ್ಲಿ

ಡಾ॥ ಅಂಬೇಡ್ಕರ್ ಚಿಂತನೆಯ ಮಹತ್ವ
ರಾಜ್ಯ ಯುವಜನ ನೀತಿ ಅತ್ಯವಶ್ಯ
ವಿಶ್ವಸಂಸ್ಥೆಯ ಹುಟ್ಟು, ಕಾರ್ಯ ವಿಧಾನ
ಕ್ರಾಂತಿಕಾರಿ ಭಗತ್ ಸಿಂಗ್ ಜೀವನ–ಸಾಧನೆ
ಮುಸ್ಲಿಂ ಬಾಲಕಿಯರಿಗೆ ಶಿಕ್ಷಣ
ಸಮಾಜವಾದ ಎಂದರೇನು?
ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಮಹಿಳಾ ಚಳವಳಿ
ಜಾತಿವಿನಾಶ, ಯುವಜನರು ಸಂಘಟನೆಯಾಗುವ ತುರ್ತು
ನಾನು ಸಾಮಾಜಿಕ ಕ್ಷೇತ್ರಕ್ಕೆ ಕಾಲಿಟ್ಟ ಹಿನ್ನೆಲೆ
ಪ್ರಸ್ತುತ ಸಂದರ್ಭದಲ್ಲಿ ಮಾಧ್ಯಮದ ಪಾತ್ರ
ಖಾಪ್ ಪಂಚಾಯತ್ ಎಂದರೇನು?
ಹಿಂದುಳಿದ ವರ್ಗಗಳ ಸ್ಥಿತಿಗತಿ
ಮೀಸಲಾತಿಯ ಹಿನ್ನೆಲೆ
ಮುಸ್ಲಿಮರ ಸ್ಥಿತಿಗತಿ,




**ಮಂಡ್ಯ ಸಮಾಜವಾದಿ ವೇದಿಕೆ ವತಿಯಿಂದ ಕುವೆಂಪು ಜನ್ಮದಿನ ಆಚರಣೆ**

'ಮುಸ್ಲಿಂ ದನಿ' ಪತ್ರಿಕೆಯ ಪ್ರಾರಂಭ
ಸಫಾಯಿ ಕರ್ಮಚಾರಿ ಆಂದೋಲನ
ಸಮಾಜವಾದ ಎಂದರೇನು?
ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಮಹಿಳಾ ಚಳವಳಿ
ಜಾತಿವಿನಾಶ, ಯುವಜನರು ಸಂಘಟನೆ ಯಾಗುವ ತುರ್ತು
ನಾನು ಸಾಮಾಜಿಕ ಕ್ಷೇತ್ರಕ್ಕೆ ಕಾಲಿಟ್ಟ ಹಿನ್ನೆಲೆ
ಪ್ರಸ್ತುತ ಸಂದರ್ಭದಲ್ಲಿ ಮಾಧ್ಯಮದ ಪಾತ್ರ
ಖಾಪ್ ಪಂಚಾಯತ್ ಎಂದರೇನು?
ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ
ಗ್ರಾಮೀಣ ಸಂಸ್ಕೃತಿ
ಡಾ॥ ಅಬ್ರಹಾಂ ಟಿ. ಕೋವೂರ್ ವಿಚಾರ–ಸಾಧನೆ
ಮಕ್ಕಳು ಮತ್ತು ಮಹಿಳೆಯರ ಸಾಗಣೆ
ಗ್ರಾಮೀಣ ಕ್ಷೇತ್ರದಲ್ಲಿ ಸಾಧಕರು
ದೇಶದ ಮತ್ತು ಆದಿವಾಸಿ ಜನರ ಸ್ಥಿತಿಗತಿ
ಕೂಲಿ ಕಾರ್ಮಿಕರ ಸಂಘಟನೆಯ ಮಹತ್ವ
ವಿದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿವೇತನ
ಡೇಟಾ (ಅಂಕಿ–ಅಂಶ) ಬಳಸುವ ವಿಧಾನ
ಪಂಚಾಯತ್ ರಾಜ್ ವ್ಯವಸ್ಥೆ
ರಾಜಕೀಯದಲ್ಲಿ ಮಹಿಳೆಯರ ಪ್ರವೇಶಕ್ಕೆ ಅಡ್ಡಿಗಳು,
ರಾಜಕೀಯ ಪಕ್ಷಗಳು ಮತ್ತು ಅವುಗಳ ಅಂಗಸಂಸ್ಥೆಗಳು
ಎಡ ಪಕ್ಷಗಳು ಮತ್ತು ಬಲ ಪಕ್ಷಗಳು
ಕರ್ನಾಟಕದಲ್ಲಿ ವಿಚಾರವಾದಿ ಆಂದೋಲನ
ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ
ಸ್ವಾಮಿ ಅಗ್ನಿವೇಶ್ ಕುರಿತು ಡಾ॥ ಸುನೀಲಮ್ ಲೇಖನದ ಓದು
ಉಪಚುನಾವಣೆ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಮಂದಿರಗಳಿಗೆ ತಲಾ ರೂ.3ಕೋಟಿ ಮಂಜೂರು
ಉ.ಪ್ರದೇಶದ ನಿವೃತ್ತ ಡಿಜಿಪಿ ದಾರಾಪುರಿ ಬಂಧನ/ಬಿಡುಗಡೆ
ಕುವೆಂಪು ನಾಟಕಗಳಲ್ಲಿ ಚಿತ್ರಣಗೊಂಡಿರುವ ಶೋಷಿತರು
ಪ್ರೊ॥ ಎಂ.ಡಿ.ನಂಜುಂಡಸ್ವಾಮಿ ಕುರಿತ ಲೇಖನದ ಓದು




**ಕರ್ನಾಟಕ ಸಮಾಜವಾದಿ ವೇದಿಕೆ ನಡೆಸಿದ ಕಾರ್ಯಕ್ರಮಗಳಲ್ಲಿ ವಿತರಿಸಿದ ಪುಸ್ತಕ**

'ಚೋಮನ ದುಡಿ' ಕಾದಂಬರಿಯಲ್ಲಿ ಸಮಾಜವಾದಿ ಆಶಯ,
ಸೆಕ್ಸ್ ಮತ್ತು ಜೆಂಡರ್
ಇಸ್ಲಾಂ ಕುರಿತು ತಪ್ಪುತಿಳುವಳಿಕೆ

.. .. ಹೀಗೆ 300ಕ್ಕೂ ಹೆಚ್ಚು ದಿನಗಳಲ್ಲಿ 250ಕ್ಕೂ ಹೆಚ್ಚು ವಿಷಯಗಳ ಕುರಿತು ವಿಚಾರ ಮಂಡಿಸಲಾಯಿತು ಮತ್ತು ಚರ್ಚೆ ನಡೆಸಲಾಯಿತು. ಇದರಿಂದ ದೇಶ ಮತ್ತು ಪ್ರಪಂಚಕ್ಕೆ ಸಂಬಂಧಿಸಿದ ಹತ್ತಾರು ವಿಷಯಗಳ ಬಗ್ಗೆ ತಿಳುವಳಿಕೆಯನ್ನು ಹಂಚಿಕೊಳ್ಳಲಾಯಿತು.

ಮೊದಲು ಇದು ಕಾನ್ಫರೆನ್ಸ್ ಕಾಲ್ ಮೂಲಕ ನಡೆಯುತ್ತಾ ಬಂತು. ಆಗ ಕನಿಷ್ಠ 12 ಮತ್ತು ಗರಿಷ್ಠ 30ರವರೆಗೆ ಮಿತ್ರರ ಹಾಜರಾತಿ ಇರುತ್ತಿತ್ತು. ಮೂರು ತಿಂಗಳ ನಂತರ ಇದನ್ನು ಗೂಗಲ್ ಮೀಟ್ ಮೂಲಕ ನಡೆಸಲು ಪ್ರಾರಂಭಿಸಲಾದಾಗ, ಮೊದಲು ಹಾಜರಾತಿ ಕಡಿಮೆ ಆಯಿತು. ಆದರೆ, ಕ್ರಮೇಣ ಈ ಸಭೆಗೂ ಅನೇಕ ಮಿತ್ರರು ಸೇರಿಕೊಳ್ಳುತ್ತಾ ಬಂದರು. ಲಾಕ್‌ಡೌನ್ ಸಡಿಲಗೊಳ್ಳುತ್ತಾ ಬಂದ ಬಳಿಕ, ಬೆಳಗಿನ ಸಭೆಗೆ ಹಾಜರಾಗುವುದು ಅನೇಕರಿಗೆ ಅನುಕೂಲ ಆಗಲಿಲ್ಲ. ಹಾಗಾಗಿ, ಈ ಸಭೆಯನ್ನು ಪ್ರತಿದಿನ ಸಂಜೆ 7ರಿಂದ 8ರವರೆಗೆ ನಡೆಸಲು ಪ್ರಾರಂಭಿಸಲಾಯಿತು. ಈಗಲೂ ಈ ಗೂಗಲ್ ಮೀಟ್ ಪ್ರತಿದಿನ ಸಂಜೆ 7ರಿಂದ 8ರವರೆಗೆ ನಡೆಯುತ್ತಿದೆ.

ನಿರಂತರವಾಗಿ 150 ದಿನಗಳವರೆಗೆ ಸಭೆ ನಡೆದ ಸಂದರ್ಭದಲ್ಲಿ, ಅದುವರೆಗೆ ಮಂಡಿಸಲಾದ ವಿಷಯಗಳ ಮತ್ತು ವಿಷಯ ಮಂಡಿಸಿದವರ ಬಗೆಗಿನ ಮಾಹಿತಿ ದೊರಕುವಂಥ ಒಂದು ಪೋಸ್ಟರ್ ಸಿದ್ಧಪಡಿಸಲಾಯಿತು.

* * *

ಕಾನ್ಫರೆನ್ಸ್ ಕಾಲ್ (ಗೂಗಲ್) ಸಭೆಯಲ್ಲಿ **'ಸಂವಾದ'** ಮಾಸ ಪತ್ರಿಕೆಯ ಕೆಲವು ಲೇಖನಗಳನ್ನು ಓದಲಾಯಿತು. ಎಲ್ಲರೂ ತಲಾ ರೂ.250 ನೀಡಿದರೆ, ಕರ್ನಾಟಕ ಸಮಾಜವಾದಿ ವೇದಿಕೆ ವತಿಯಿಂದ ಬಾಕಿ ತಲಾ ರೂ.200 ನೀಡಲಾಗುವುದು ಎಂದು ತಿಳಿಸಲಾಯಿತು. ಪತ್ರಿಕೆಯನ್ನು ಒಂದು ವರ್ಷ ಕಾಲ ಎಲ್ಲರೂ ಮನೆಗೆ ತರಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲಾಯಿತು. ಮೂರು ಕಂತುಗಳಲ್ಲಿ ಒಟ್ಟು 21 ಜನರು ವಾರ್ಷಿಕ ಚಂದಾದಾರರಾದರು.

* *

ಸರ್ಕಾರಿ ಶಾಲೆ, ಸರ್ಕಾರಿ ಪಿಯು ಕಾಲೇಜಿನಲ್ಲಿ ಓದಿ, ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಬಾಲಕಿಯರಿಗೆ ವಾರ್ಷಿಕ ರೂ.24,000/– ಸ್ಕಾಲರ್‌ಷಿಪ್ ನೀಡುವ ಯೋಜನೆ ವಿಷಯ ಗೊತ್ತಾಯಿತು. ಈ ಮಾಹಿತಿಯನ್ನು ಬಾಲಕಿಯರಿಗೆ ತಿಳಿಸಿ, ಅವರಿಂದ ಆನ್‌ಲೈನ್ ಅರ್ಜಿ ಹಾಕಿಸುವ ಸಂಬಂಧ ಮಂಡ್ಯ ನಗರದ ಚೈತ್ರಾ (ಮಹಿಳಾ ಅಧ್ಯಯನದಲ್ಲಿ ಎಂ.ಎ. ಮುಗಿಸಿರುವ ಉತ್ಸಾಹಿ ಯುವತಿ) ಎಂಬವರನ್ನು ಗುರುತಿಸಿ, ನವೆಂಬರ್ ತಿಂಗಳಲ್ಲಿ ಅವರಿಗೆ ಈ ಕೆಲಸ ಮಾಡಲು ತಿಳಿಸಲಾಯಿತು. ಅವರು ಕೇವಲ ಒಂದು ವಾರದಲ್ಲಿ 69 ವಿದ್ಯಾರ್ಥಿನಿಯರಿಂದ ಅರ್ಜಿ ಹಾಕಿಸಿದರು. ಇವರಲ್ಲಿ 17 ವಿದ್ಯಾರ್ಥಿನಿಯರಿಂಗ ಸ್ಕಾಲರ್‌ಷಿಪ್ ನೀಡುವವರು ಹೆಚ್ಚಿನ ಮಾಹಿತಿಯನ್ನು ಕೇಳಿದ್ದಾರೆ.

ವಾಡಿ ಪಟ್ಟಣಕ್ಕೆ ಡಾ.ಅಂಬೇಡ್ಕರ್ ಭೇಟಿಯ
75ನೇ ವರ್ಷದ ಸವಿನೆನಪಿನ

**ಮಹಾತ್ಮಾ ಜೋತಿಬಾ ಫುಲೆ ಗ್ರಂಥಾಲಯ**

ವಾಡಿ (ಜಂ). -585225
ತಾ.ಚಿತ್ತಾಪುರ ಜಿ.ಕಲಬುರ್ಗಿ
ಮೊ. 9448881313 / 9844475258

ಕೋಚಿಂಗ್‌ಗಾಗಿ ಚೈತ್ರಾ ಧಾರವಾಡಕ್ಕೆ ಹೋದ ಕಾರಣ, ಮಂಡ್ಯದಲ್ಲಿ ಯುವತಿಯರಿಗೆ ಮತ್ತು ಕಾಲೇಜ್ ವಿದ್ಯಾರ್ಥಿನಿಯರಿಗೆ ಸಮಾಜವಾದಿ ತತ್ವವನ್ನು ಮತ್ತು ಸಮಾಜವಾದಿ ವೇದಿಕೆಯನ್ನು ಪರಿಚಯಿಸುವ ಕಾರ್ಯದಲ್ಲಿ ತೊಡಗಲು ಬಿ.ಎಡ್. ವಿದ್ಯಾರ್ಥಿನಿ ಲತಾ ಅವರನ್ನು ನವೆಂಬರ್ ಕಡೇ ವಾರದಲ್ಲಿ ನೇಮಿಸಲಾಯಿತು. ಇವರು ಡಿಸೆಂಬರ್ ತಿಂಗಳು ಕಾರ್ಯ ನಿರ್ವಹಣೆ ಮಾಡಿದರು.

* * *

ಕಲಬುರಗಿ ಜಿಲ್ಲೆಯ ವಾಡಿ ಪಟ್ಟಣಕ್ಕೆ ಡಾ॥ ಅಂಬೇಡ್ಕರ್ ಭೇಟಿ ನೀಡಿ 75 ವರ್ಷಗಳಾದ ಸಂದರ್ಭದಲ್ಲಿ ಯುವಮಿತ್ರ ವಿಕ್ರಮ್ ತೇಜಸ್ ಮತ್ತು ಮಿತ್ರರು ಪ್ರಾರಂಭಿಸಲು ಉದ್ದೇಶಿಸಿದ ಮಹಾತ್ಮಾ ಜ್ಯೋತಿಬಾ ಫುಲೆ ಗ್ರಂಥಾಲಯಕ್ಕೆ ಧನಸಹಾಯ ನೀಡಲಾಯಿತು.

* * *

ಕಲಬುರಗಿ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ ಕಾರ್ಡ್ ಪಡೆದಿರುವ ಬಡವರನ್ನು ಸಂಘಟಿಸುತ್ತಾ ಜೊತೆಗೆ ಮಕ್ಕಳಿಗೆ ಶಾಲಾ ಅಭ್ಯಾಸ ಮಾಡಿಸುತ್ತಿರುವ ಅಶ್ವಿನಿ ಮದನ್‌ಕರ್ ಅವರನ್ನು ಪ್ರೋತ್ಸಾಹಿಸಲು ಧನಸಹಾಯ ಮಾಡಲಾಯಿತು.

* * *

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರ ಗ್ರಾಮದ ವಿದ್ಯಾರ್ಥಿನಿ ನಾಗರತ್ನ. ಗಬ್ಬೂರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳು ಇರುವ ಕುಟುಂಬಗಳನ್ನು ಗುರುತಿಸಿ, ಅವರಿಗೆ ಭಾರತ ಸರ್ಕಾರದ ಸುಕನ್ಯಾ ಸಮೃದ್ಧಿ ಯೋಜನೆ ಬಗ್ಗೆ ತಿಳಿಸುವ ಕೆಲಸ ಮಾಡಲು ಸೂಚಿಸಲಾಯಿತು. ನಾಗರತ್ನ ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಂದು ಮಗುವಿನ ಹೆಸರಿನಲ್ಲಿ ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ ಖಾತೆ ಮಾಡಿಸಿ, ಪ್ರಾರಂಭಿಕ ಠೇವಣಿ ಕನಿಷ್ಠ ರೂ.250/–ಗಳನ್ನು ಮಾಡಿಸಿದರೆ, ನಾಗರತ್ನ ಇವರಿಗೆ ಗೌರವಧನವಾಗಿ ರೂ.50/–ಗಳನ್ನು ನೀಡುವುದಾಗಿ ತಿಳಿಸಲಾಗಿದೆ.

■




ಡಾ॥ ಅಂಬೇಡ್ಕರ್ ಪರಿನಿರ್ವಾಣ ದಿನ ನಿಮಿತ್ತ 'ಸಂವಿಧಾನ' ಮತ್ತು 'ವಿರೋಧಾಭಾಸ ಕೊನೆಗೊಳ್ಳಲಿ' ಎಂಬ ಕಿರುಪುಸ್ತಕಗಳನ್ನು, ಮಂಡ್ಯ ಸಮಾಜವಾದಿ ವೇದಿಕೆ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

# ಶಿರಾ ತಾಲ್ಲೂಕಿನಲ್ಲಿ ಸಮಾಜವಾದಿ ಶಿಬಿರ




'ಸಮಾಜವಾದಿ ಶಿಬಿರ'ದಲ್ಲಿ ಭಾಗವಹಿಸಿದ್ದ ಯುವಜನರ ಒಂದು ತಂಡ

ಮಾರ್ಚ್ 14– 15ರಂದು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮದಲ್ಲಿ ತಾಲ್ಲೂಕಿನ ಆಸಕ್ತ ಯುವಜನರಿಗಾಗಿ ಏರ್ಪಡಿಸಲಾಗಿದ್ದ **'ಸಮಾಜವಾದಿ ಶಿಬಿರ'**ದ ಕೆಲವು ದೃಶ್ಯಗಳು ಕೆಲವು ದೃಶ್ಯಗಳು




ಮಂಜುನಾಥ ಅಮಲಗೊಂದಿ ಮತ್ತು ಭವ್ಯಾ ವಿಷಯ ಮಂಡನೆ ಮಾಡುತ್ತಿರುವುದು




ಯುವಜನ ತರಬೇತುದಾರ **ಸಿ.ಎಂ.ಎಸ್. ಗೌಡ** ಅವರಿಂದ ವಿಷಯ ಮಂಡನೆ



ಮಾರ್ಚ್ 14ರ ರಾತ್ರಿ ಫ್ಲಡ್‌ಲೈಟ್ ಊಟದ ಬಳಿಕ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಒಂದು ತಂಡ

ಶಿಬಿರದಲ್ಲಿ ಪ್ರತಿ ಇಬ್ಬರ ತಂಡ ಹತ್ತು ನಿಮಿಷ ಒಂದು ವಿಷಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವುದು





ಸಂವಿಧಾನ, ಮೀಸಲಾತಿ ಕುರಿತು ಶಿಬಿರಾರ್ಥಿಗಳೊಂದಿಗೆ ವಿಚಾರ ಹಂಚಿಕೊಳ್ಳುತ್ತಿರುವ ಹೈಕೋರ್ಟ್ ನ್ಯಾಯವಾದಿ ಎಚ್.ವಿ.ಮಂಜುನಾಥ

# ಕರ್ನಾಟಕ ಸಮಾಜವಾದಿ ವೇದಿಕೆ

## ಮಂಡ್ಯ ಜಿಲ್ಲಾ ಘಟಕದ ಚಟುವಟಿಕೆಗಳು

ಸೆಪ್ಟೆಂಬರ್ ತಿಂಗಳಿಂದ ಮಂಡ್ಯ ಜಿಲ್ಲಾ ಮಟ್ಟದಲ್ಲಿ ಕರ್ನಾಟಕ ಸಮಾಜ ವಾದಿ ವೇದಿಕೆಯ ಜಿಲ್ಲಾ ಘಟಕವನ್ನು ಆರಂಭಿಸಲಾಯಿತು. ದಲಿತ ಚಳವಳಿಯ ಹಿನ್ನೆಲೆಯನ್ನು ಹೊಂದಿರುವ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾಗಿದ್ದ ಮತ್ತು ಜನ ಚಳವಳಿಗೆ ತಮ್ಮ ಹಾಡುಗಳ ಮೂಲಕ ಶಕ್ತಿ ತುಂಬುತ್ತಾ ಬಂದಿರುವ **ಹುರುಗಲವಾಡಿ ರಾಮಯ್ಯ** ಜಿಲ್ಲಾ ಸಂಚಾಲಕರಾಗಿ ನೇಮಕಗೊಂಡು, ಅಲ್ಲಿ ಆಸಕ್ತ ಮಿತ್ರರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡರು.

ಪ್ರಸ್ತುತ 11 ಜನರ ತಂಡ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲೂ ಕರ್ನಾಟಕ ಸಮಾಜವಾದಿ ವೇದಿಕೆ ಘಟಕಗಳನ್ನು ರಚಿಸಲು ಪ್ರಯತ್ನಿಸುತ್ತಿದೆ.

ಕನ್ನಡದ ಉತ್ತಮ ಮಾಸಪತ್ರಿಕೆ 'ಸಂವಾದ'. ಬೆಂಗಳೂರಿನ ಸ್ಫೂರ್ತಿಧಾಮ ಸಂಸ್ಥೆಯು ಇದನ್ನು ಪ್ರಕಟಿಸುತ್ತಿದೆ. ಇದರ ಸಂಪಾದಕರು ಇಂದೂಧರ ಹೊನ್ನಾಪುರ.



ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಜಿಲ್ಲಾ ಶಾಖೆಯ ಸಕ್ರಿಯ ಕಾರ್ಯಕರ್ತರು ಸಭೆ ನಡೆಸುತ್ತಿರುವುದು



**ನವೆಂಬರ್ 11ರಂದು ಮಂಡ್ಯ ನಗರದ ಗಾಂಧಿ ಭವನದಲ್ಲಿ ಮೌಲಾನಾ ಅಬುಲ್ ಕಲಾಂ ಆಜ಼ಾದ್ ಜನ್ಮದಿನ ಕಾರ್ಯಕ್ರಮ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರೊ|| ಬಿ.ಎಸ್. ಚಂದ್ರಶೇಖರನ್ ಮುಫ್ತಿ ರಿಜ್ವಾನ್ ಖಾಸ್ಮಿ, ಪ್ರೊ|| ಜಿ.ಟಿ.ವೀರಪ್ಪ ಎಚ್.ಕೆ. ಚಂದ್ರಹಾಸ್, ಸುರೇಶ್ ಶಂಭೂನಹಳ್ಳಿ, ಸಲೀಂ ಅಹಮದ್ ಹುರುಗಲವಾಡಿ ರಾಮಯ್ಯ, ಮೊಹಮ್ಮದ್ ತಾಹೀರ್ ಟಿ.ಎಂ. ಸುಂದರೇಶ್ ಮುಂತಾದವರು**



**ಅಧ್ಯಕ್ಷೀಯ ಭಾಷಣ ಮಾಡುತ್ತಿರುವ ರೈತ ನಾಯಕಿ, ಪ್ರಗತಿಪರ ಚಿಂತಕಿ ಸುನಂದಾ ಜಯರಾಂ**

ಈ ಪತ್ರಿಕೆ ಬಗ್ಗೆ ತಿಳಿಸಿ, ಇದನ್ನು ಪ್ರತಿಯೊಬ್ಬರೂ ಮನೆಗೆ ತರಿಸಿಕೊಳ್ಳಬೇಕೆಂದು ತಿಳಿಸಲಾಯಿತು.

ಎಲ್ಲರೂ ತಲಾ ರೂ.250/– ನೀಡಿದರೆ, ಕರ್ನಾಟಕ ಸಮಾಜವಾದಿ ವೇದಿಕೆ ವತಿಯಿಂದ ಬಾಕಿ ತಲಾ ರೂ.200/– ನೀಡಲಾಗುವುದು ಎಂದು ತಿಳಿಸ ಲಾಯಿತು. ಪತ್ರಿಕೆಯನ್ನು ಕನಿಷ್ಠ ಒಂದು ವರ್ಷ ಕಾಲ ಪ್ರತಿಯೊಬ್ಬರೂ ಮನೆಗೆ ತರಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲಾಯಿತು. ಈ ಘಟಕದ ಎಲ್ಲ 11 ಜನರೂ ತಮ್ಮ ಪಾಲಿನ ಹಣ ನೀಡಿ, ವಾರ್ಷಿಕ ಚಂದಾದಾರರಾದರು.

ಮಂಡ್ಯ ಶಾಖೆಯು 4–9–2020ರಿಂದ ಪ್ರತಿ ಶುಕ್ರವಾರ ಸಭೆ ನಡೆಸಿಕೊಂಡು ಬರುತ್ತಿದೆ. ಈ ಸಭೆಗಳಲ್ಲಿ ಸಮಾಜವಾದಿ ಆಂದೋಲನ ರೂಪುಗೊಂಡ ಬಗೆ, ಸಮಾಜವಾದಿ ನಾಯಕರ ಹಿನ್ನೆಲೆ, ಫ್ರಾನ್ಸ್ ಕ್ರಾಂತಿ, ಗಾಂಧಿ ಮತ್ತು ಅಂಬೇಡ್ಕರ್ ಪ್ರತಿಪಾದಿಸಿದ ತತ್ವಗಳು ಹಾಗೂ ಅವುಗಳಿಗೆ ಸಮಾಜವಾದಿ ಚಿಂತನೆಯ ಸಂಬಂಧ, ಸ್ವಾತಂತ್ರ್ಯ ಹೋರಾಟದಲ್ಲಿ ಸಮಾಜವಾದಿಗಳ ಪಾತ್ರ, ಸಂವಿಧಾನ ರಚನಾ ಪ್ರಕ್ರಿಯೆ, ಅದರಲ್ಲಿ ಸಮಾಜವಾದಿಗಳ ಪಾತ್ರ, ಸಂವಿಧಾನ ಅನುಚ್ಛೇದಗಳಲ್ಲಿ ಅಡಗಿರುವ ಸಮಾಜವಾದಿ ತತ್ವಗಳು, ಸ್ವಾತಂತ್ರ್ಯ ಬಂದ ಬಳಿಕ ರಚನೆಯಾದ ಸಮಾಜವಾದಿ ಪಕ್ಷ, ಅದರ ಹೋರಾಟಗಳು, ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆ ಬೆಳೆದುಕೊಂಡು ಬಂದ ರೀತಿ, ತುರ್ತು ಪರಿಸ್ಥಿತಿ, ಆ ಕಾಲದಲ್ಲಿ ದೇಶದ ಮತ್ತು ರಾಜ್ಯದ ಸಮಾಜ ವಾದಿಗಳ ನಡೆ, ಜನತಾ ಪಕ್ಷ ರಚನೆ, ಜನತಾ ಸರ್ಕಾರ, ರಾಜ್ಯದಲ್ಲಿ ಜನತಾ ಸರ್ಕಾರ, ದಲಿತ ಸಂಘರ್ಷ ಸಮಿತಿ ಹುಟ್ಟು, ಬಹುಜನ ಸಮಾಜ ಪಾರ್ಟಿ ವಿಷಯ, ಜ್ಯೋತಿಬಾ–ಸಾವಿತ್ರಿಬಾಯಿ ಫುಲೆ, ವಿಕೇಂದ್ರೀಕರಣ, ಗ್ರಾಮ ಪಂಚಾಯತಿಗಳ ಮಹತ್ವ ಇತ್ಯಾದಿ ವಿಷಯಗಳನ್ನು ಮನವರಿಕೆ ಮಾಡಿಕೊಳ್ಳಲಾಯಿತು.

11–11–2020ರಂದು ರಾಷ್ಟ್ರೀಯ ನಾಯಕರೂ, ಸ್ವಾತಂತ್ರ್ಯ ಚಳವಳಿಯ ಮೇರು ಮುಖಂಡರೂ ಮತ್ತು ಸ್ವತಂತ್ರ ಭಾರತದ ಪ್ರಥಮ ಕೇಂದ್ರ ಸರ್ಕಾರದಲ್ಲಿ ಶಿಕ್ಷಣ ಸಚಿವರೂ ಆಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜನ್ಮ ದಿನಾಚರಣೆಯನ್ನು 'ಉನ್ನತ ಶಿಕ್ಷಣ ದಿನ'ವಾಗಿ ಆಚರಿಸಲಾಯಿತು.

ನಿವೃತ್ತ ಪ್ರಾಂಶುಪಾಲ ರಾದ ಪ್ರೊ|| ಬಿ.ಎಸ್. ಚಂದ್ರಶೇಖರನ್ ಉದ್ಘಾಟನೆ ಮಾಡಿದ ಕಾರ್ಯಕ್ರಮದಲ್ಲಿ ಮುಫ್ತಿ ರಿಜ್ವಾನ್ ಖಾಸ್ಮಿ, ಪ್ರೊ|| ಜಿ.ಟಿ.ವೀರಪ್ಪ ವಿಚಾರ ಮಂಡಿಸಿದರು. ಎಚ್.ಕೆ.ಚಂದ್ರಹಾಸ್, ಸುರೇಶ್ ಶಂಭೂನಹಳ್ಳಿ, ಸಲೀಂ ಅಹಮದ್ ಮಾತನಾಡಿದರು. ಜಿಲ್ಲಾ ಸಮಾಜವಾದಿ ವೇದಿಕೆಯ ಸಂಚಾಲಕ ಹುರುಗಲವಾಡಿ ರಾಮಯ್ಯ ಪ್ರಾಸ್ತಾವಿಕ ಮಾತುಗಳನ್ನು ಆಡಿದರು; ಮೊಹಮ್ಮದ್ ತಾಹೀರ್ ನಿರೂಪಣೆ ಮಾಡಿದರು; ಟಿ.ಎಂ.ಸುಂದರೇಶ್ ಸ್ವಾಗತಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ರಾಮಯ್ಯ ಮತ್ತು ಚಾಮನಹಳ್ಳಿ ಮಂಜು ಸಮಾಜವಾದಿ ಆಶಯದ ಗೀತೆಗಳನ್ನು ಹಾಡಿದರು. ■

# ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನಲ್ಲಿ ಚಟುವಟಿಕೆಗಳು





ಹನುಮನಾಳ್ ಗ್ರಾಮಕ್ಕೆ ಶಿವಣ್ಣ ಮಾಸ್ಟರ್ ಮತ್ತು ನ್ಯಾಯವಾದಿ ನಾಗಮ್ಮ ಅವರೊಂದಿಗೆ ಸ್ಥಳಭೇಟಿ ಮಾಡಿ ಎಲ್ಲಾ ಮಾಹಿತಿ ಸಂಗ್ರಹಿಸಿದ ಮಂಜುನಾಥ್




ಮೃತ ಮುರುಗನ್ ಪತ್ನಿ ಪ್ರಿಯಾ ಮತ್ತು ಅವರ ಇಬ್ಬರು ಮಕ್ಕಳು

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ಹನುಮನಾಳು ಗ್ರಾಮ ಪಂಚಾಯತಿಯಲ್ಲಿ ಪೌರಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಮುರುಗನ್ ಮ್ಯಾನ್‌ಹೋಲ್ ಸ್ವಚ್ಛ ಮಾಡುತ್ತಿದ್ದಾಗ ಮೃತಪಟ್ಟ ಪ್ರಕರಣವನ್ನು ಪತ್ರಿಕೆಯಲ್ಲಿ ಓದಿ, ಗಮನಿಸಲಾಯಿತು.

ಈ ಕುರಿತು ಮಂಜುನಾಥ್, ಶಿವಣ್ಣ ಮಾಸ್ಟರ್ ಮತ್ತು ಮಿತ್ರರು ಕ್ರಿಯಾಶೀಲರಾದರು. ಸಮಾಜ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿದರು. ಮೃತರ ಪತ್ನಿ ಪ್ರಿಯಾ ಅವರಿಗೆ ತಾತ್ಕಾಲಿಕ ಪರಿಹಾರ ಕೊಡಿಸಲಾಯಿತು; ಪೂರ್ಣ ಪರಿಹಾರವನ್ನು ಮತ್ತು ಮೃತರ ಪತ್ನಿಗೆ ಖಾಯಂ ಕೆಲಸವನ್ನು ಕೊಡಿಸುವ ಕಾರ್ಯ ನಡೆದಿದೆ.

* * *

ಇದೇ ತಾಲ್ಲೂಕಿನ ಎಷ್ಟು ಗ್ರಾಮ ಪಂಚಾಯತಿಗಳಲ್ಲಿ 'ಮಕ್ಕಳ ಗ್ರಾಮ ಸಭೆಗಳನ್ನು ನಡೆಸಲಾಗಿದೆ?' ಎಂಬ ವಿಷಯ ಕುರಿತು ಮಂಜುನಾಥ್ ಅವರು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದರು. ■



1. ಅರ್ಜಿದಾರರ ಪೂರ್ತಿ ಹೆಸರು :
2. ಅರ್ಜಿದಾರರ ವಿಳಾಸ :
3. ಯಾವ ದಾಖಲಾತಿ / ಪರಿಶೀಲಿಸಲು / ನಕಲು ನೀಡುವಂತೆ ಕೋರಿದ ಬಗ್ಗೆ ವಿವರ :

2018- 2019

5. ಸಾರ್ವಜನಿಕ ಮಾಹಿತಿ ಅಧಿಕಾರಿಯ ಹುದ್ದೆ ಮತ್ತು ವಿವರ :

'ಮಕ್ಕಳ ಗ್ರಾಮ ಸಭೆಗಳನ್ನು ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ನಡೆಸಲಾಗಿದೆ?' ಕುರಿತು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ

## 2021ರಲ್ಲಿ

ಕರ್ನಾಟಕ ಸಮಾಜವಾದಿ ವೇದಿಕೆಗೆ ಮಂಡ್ಯ ಜಿಲ್ಲಾ ಸಂಚಾಲಕರಾಗಿ ಸೆಪ್ಟೆಂಬರ್ 2020ರಿಂದ ಕೆಲಸ ಮಾಡುತ್ತಿರುವ ಹುರುಗಲವಾಡಿ ರಾಮಯ್ಯ ಮತ್ತು ಮಿತ್ರರ ಪ್ರಯತ್ನಗಳಿಂದ ಉತ್ತಮ ಕಾರ್ಯಗಳು ನಡೆಯುತ್ತಿವೆ. ಹಾಗೆಯೇ, ಈ ಜನವರಿಯಿಂದ ಹಾವೇರಿ ಜಿಲ್ಲಾ ಸಂಚಾಲಕರಾಗಿ ಕರಿಬಸಪ್ಪ ಎಂ. ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಮಾರ್ಚ್ ತಿಂಗಳಿಂದ ದಾವಣಗೆರೆ ಜಿಲ್ಲೆಯಲ್ಲಿ ಜಬೀನಾ ಖಾನಂ ಅವರು ಕೆಲಸ ಮಾಡಲು ಪ್ರಾರಂಭಿಸಲಿದ್ದಾರೆ.

ಇದೇ ರೀತಿ, ಕಲಬುರಗಿ ಮತ್ತು ಇತರ ಜಿಲ್ಲೆ/ತಾಲ್ಲೂಕುಗಳಲ್ಲಿ ಕ್ರಮೇಣ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶ ಇದೆ. ಆದರೆ, ಈ ವಿಷಯದಲ್ಲಿ ಅವಸರ ಇಲ್ಲ. ಸಮಾಜವಾದಿ ವಿಚಾರವನ್ನು ತಿಳಿದುಕೊಳ್ಳಲು ಮತ್ತು ಪ್ರಸಾರ ಮಾಡಲು ಆಸಕ್ತಿ ಇರುವ ಯುವಜನರ ಸಂಪರ್ಕ ಸಾಧ್ಯವಾದಾಗ, ಇತರ ಜಿಲ್ಲೆ/ತಾಲ್ಲೂಕುಗಳಲ್ಲಿ ಸಮಾಜವಾದಿ ವಿಚಾರವನ್ನು ತಿಳಿಸುವ ಮತ್ತು ಪ್ರಸಾರ ಮಾಡುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗುವುದು.

ಗಜೇಂದ್ರ ಟಿ. ಇವರ ನೇತೃತ್ವದಲ್ಲಿ ಅರ್ಥಪೂರ್ಣ ಚಟುವಟಿಕೆಗಳನ್ನು ಹಮ್ಮಿಕೊಂಡಿರುವ 'ಬೆಂಗಳೂರು ದಲಿತ್ ಫೋರಮ್' ಕಡೆಯಿಂದ ಪೂರ್ಣ ಸಹಕಾರ, ಪ್ರೋತ್ಸಾಹ, ನೆರವು ದೊರಕುತ್ತಿದೆ. ಹೀಗೆಯೇ, ಎಲ್ಲರ ಸಹಕಾರ, ಸಲಹೆ, ಪಾಲ್ಗೊಳ್ಳುವಿಕೆಯನ್ನು ನಿರೀಕ್ಷಿಸಲಾಗಿದೆ.

■ಮಂಗ್ಳೂರ ವಿಜಯ

ಬೆಂಗಳೂರು ನಗರ ಜಿಲ್ಲೆ ಸೂಲಿಕೆರೆ ಗ್ರಾಮದ ಪ್ರೌಢಶಾಲೆ ಮಕ್ಕಳೊಂದಿಗೆ ಸಮಾಜವಾದಿ ವೇದಿಕೆಯ ಅನಂತಪದ್ಮನಾಭನ್ ಸುಷ್ಮಿತಾ ಮತ್ತು ಶಿಕ್ಷಕರಾದ ಮಂಜುನಾಥ್ ಅವರೊಂದಿಗೆ ಮಕ್ಕಳು





ರಾಜೇಶ್ವರಿ ವಿದ್ಯಾಶಾಲಾ ಮಕ್ಕಳಿಗೆ ಸಂವಿಧಾನದ ಪೀಠಿಕೆ ಇರುವ ಕಾರ್ಡ್‌ಗಳನ್ನು ನೀಡಲಾಯಿತು

ಬೆಂಗಳೂರು ಗ್ರಾಮೀಣ ಜಿಲ್ಲೆಯ ನ್ಯಾಷನಲ್ ಪಿಯು ಕಾಲೇಜಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸಂವಿಧಾನದ ಪೀಠಿಕೆ ಇರುವ ಕಾರ್ಡ್ ನೀಡಿ, ಸಂವಿಧಾನಕ್ಕೆ ಬದ್ಧತೆಯನ್ನು ತೋರುವ ಪ್ರಮಾಣವಚನ ಸ್ವೀಕರಿಸಲಾಯಿತು



## 2020ನೇ ವರ್ಷದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ಪರವಾಗಿ ಸ್ವೀಕರಿಸಿದ ದೇಣಿಗೆ ಮತ್ತು ಭರಿಸಲಾದ ವೆಚ್ಚ

### ದೇಣಿಗೆ

| | | | |
|---|---|---|---|
| ಹಿಂದಿನ ವರ್ಷದ ಉಳಿತಾಯ | ರೂ. 4,660/– | ಎನ್.ಟಿ.ಅನಂತಪದ್ಮನಾಭನ್ (ಸ್ವಂತ) | ರೂ. 6,000/– |
| ವಿ.ಎಸ್. ಅಪೂರ್ವಾ | ರೂ. 12,000/– | ಎನ್.ಟಿ.ಅನಂತಪದ್ಮನಾಭನ್ ಸಂಗ್ರಹಿಸಿದ್ದು | ರೂ. 5,000/– |
| ಮಂಗ್ಳೂರ ವಿಜಯ | ರೂ. 12,000/– | ಟಿ. ಗಜೇಂದ್ರ | ರೂ. 5,000/– |
| ವಿ.ಎಸ್. ಅನುಪಮಾ | ರೂ. 1,500/– | ಎಚ್.ವಿ.ಮಂಜುನಾಥ್ | ರೂ. 2,500/– |
| ಬಿ.ಸಿ.ಸುಷ್ಮಿತಾ | ರೂ. 3,000/– | ಎಂ. ವಿಶ್ವನಾಥ್ | ರೂ. 2,000/– |
| ಬಿ.ಸಿ.ಸುಪ್ರೀತಾ | ರೂ. 1,000/– | | ––––––––– |
| | | ಒಟ್ಟು | **ರೂ. 54,660/–** |

### ವೆಚ್ಚ

1. ಕರ್ನಾಟಕ ಸಮಾಜವಾದಿ ವೇದಿಕೆ ನಡೆಸುವ ಅಥವಾ ಭಾಗಿಯಾಗುವ ಕಾರ್ಯಕ್ರಮಗಳಲ್ಲಿ ವಿತರಣೆಗಾಗಿ ಪಡೆದ 'ನಮ್ಮ ಸಂವಿಧಾನ' (ಅತಿ ಸಂಕ್ಷಿಪ್ತದಲ್ಲಿ) ಕಿರುಪುಸ್ತಕದ 500 ಪ್ರತಿಗಳು — ರೂ. 8,000/–
2. ಜನವರಿ 2020ರಲ್ಲಿ 'ಸಮಾಜವಾದಿ ಶಿಬಿರ'ದಲ್ಲಿ ಭಾಗವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾಗಡಿ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಬಸ್ ಚಾರ್ಜ್, ಊಟ ಮತ್ತು ಸ್ನ್ಯಾಕ್ಸ್ — ರೂ. 820/–
3. ಫೆಬ್ರುವರಿ 2020ರಲ್ಲಿ 'ಸಮಾಜವಾದಿ ಶಿಬಿರ'ದಲ್ಲಿ ಭಾಗವಹಿಸಿದ್ದ ಸರ್ಕಾರಿಪ್ರಥಮ ದರ್ಜೆ ಕಾಲೇಜು ಮಾಗಡಿ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಬಸ್ ಚಾರ್ಜ್, ಊಟ ಮತ್ತು ಸ್ನ್ಯಾಕ್ಸ್ — ರೂ. 910/–
4. ಮಾರ್ಚ್ 2020ರಲ್ಲಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಗ್ರಾಮದಲ್ಲಿ ಏರ್ಪಾಟಾಗಿದ್ದ 'ಸಮಾಜವಾದಿ ಶಿಬಿರ' ಸಂಘಟನೆಗೆ ನೀಡಿದ ಸಹಾಯಧನ — ರೂ. 5,000/–
5. 'ಆಧುನಿಕ ಕನ್ನಡ ಸಾಹಿತ್ಯ: ಸಮಾಜವಾದಿ ಆಶಯ' ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಯುವ ಉಪನ್ಯಾಸಕರಿಗೆ ಊಟ ಮತ್ತು ಸ್ನ್ಯಾಕ್ಸ್ — ರೂ. 1,080/–
6. ರಾಜೇಶ್ವರಿ ವಿದ್ಯಾಶಾಲೆಯ ಒಂಬತ್ತನೇ ತರಗತಿಯ 14 ಮಕ್ಕಳನ್ನು ವಿಶ್ವೇಶ್ವರಯ್ಯ ಮ್ಯೂಜಿಯಂಗೆ ಕರೆದೊಯ್ದಾಗ ಬಸ್, ಮೆಟ್ರೊ, ಸ್ನ್ಯಾಕ್ಸ್ ವೆಚ್ಚ — ರೂ. 1,050/–
7. ರಾಜೇಶ್ವರಿ ವಿದ್ಯಾಶಾಲೆಯ ಒಂಬತ್ತನೇ ತರಗತಿಯ 14 ಮಕ್ಕಳನ್ನು ನೆಹರೂ ತಾರಾಲಯಕ್ಕೆ ಕರೆದೊಯ್ದಾಗ ಬಸ್, ಮೆಟ್ರೊ, ಸ್ನ್ಯಾಕ್ಸ್ ವೆಚ್ಚ — ರೂ. 1,050/–
8. ರಾಜೇಶ್ವರಿ ವಿದ್ಯಾಶಾಲೆಯ ಒಂಬತ್ತನೇ ತರಗತಿಯ 14 ಮಕ್ಕಳನ್ನು ಅಂಬೇಡ್ಕರ್ ಅಧ್ಯಯನ/ಸಂಶೋಧನಾ ಕೇಂದ್ರದ ಮ್ಯೂಜಿಯಂಗೆ ಕರೆದೊಯ್ದಾಗಿನ ವೆಚ್ಚ — ರೂ. 280/–
9. ವಿವಿಧ ಸಂದರ್ಭಗಳಲ್ಲಿ ಖರೀದಿಸಲಾದ ಸ್ಟೇಷನರಿ ವಸ್ತುಗಳ ಮತ್ತು ಜೆರಾಕ್ಸ್ ವೆಚ್ಚ — ರೂ. 1,600/–
10. ಕಲಬುರಗಿ ಜಿಲ್ಲೆಯ ವಾಡಿ ಪಟ್ಟಣಕ್ಕೆ ಡಾ॥ ಅಂಬೇಡ್ಕರ್ ಭೇಟಿ ನೀಡಿ 75 ವರ್ಷಗಳಾದ ಸಂದರ್ಭದಲ್ಲಿ ಯುವಮಿತ್ರ ವಿಕ್ರಮ್ ತೇಜಸ್ ಮತ್ತು ಮಿತ್ರರು ಪ್ರಾರಂಭಿಸಲು ಉದ್ದೇಶಿಸಿದ ಮಹಾತ್ಮಾ ಜ್ಯೋತಿಬಾ ಫುಲೆ ಗ್ರಂಥಾಲಯಕ್ಕೆ ಧನಸಹಾಯ — ರೂ. 1,000/–
11. ಕಲಬುರಗಿ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಕಾರ್ಡ್ ಪಡೆದಿರುವ ಬಡವರನ್ನು ಸಂಘಟಿಸುತ್ತಾ ಮಕ್ಕಳಿಗೆ ಪಾಠ ಏರ್ಪಡಿಸುತ್ತಿರುವ ಅಶ್ವಿನಿ ಮದನ್‌ಕರ್ ಅವರನ್ನು ಪ್ರೋತ್ಸಾಹಿಸಲು ಧನಸಹಾಯ — ರೂ. 1,000/–
12. ಕಾನ್ಫರೆನ್ಸ್ ಕಾಲ್ ಸಭೆಗೆ ಬರುತ್ತಿದ್ದ ಮಿತ್ರರಿಗೆ 'ಸಂವಾದ' ಮಾಸಪತ್ರಿಕೆಯ ವಾರ್ಷಿಕ ಚಂದಾ ಹಣವಾಗಿ ನೀಡಿದ ಸಹಾಯಧನ (ತಲಾ ರೂ.200/–ರಂತೆ 21 ಜನರಿಗೆ) — ರೂ. 4,200/–
13. ಸಮಾಜವಾದಿ ವೇದಿಕೆಗಾಗಿ ಮಾಹಿತಿ ಸಂಗ್ರಹಿಸಿದ್ದಕ್ಕಾಗಿ ಸುಚಿತ್ರಾ, ಮೈಸೂರು ಇವರಿಗೆ ನೀಡಿದ ಗೌರವ ಧನ — ರೂ. 1,000/–

**ರೂ. 24,990/–**

ಹಿಂದಿನ ಪುಟದ ಮೊತ್ತ (C/F) ರೂ. 24,990/–

14. (ಎ) ಮಂಡ್ಯ ಜಿಲ್ಲಾ ಸಂಚಾಲಕರಿಗೆ ಮಾಸಿಕ ರೂ.2000/–ದಂತೆ ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ನಾಲ್ಕು ತಿಂಗಳ ಗೌರವಧನ — ರೂ. 8,000/–
(ಬಿ) ಜಿಲ್ಲಾ ಘಟಕದ ಲೆಟರ್‌ಹೆಡ್, ರಬ್ಬರ್ ಸ್ಟಾಂಪ್ ಇತ್ಯಾದಿ ವೆಚ್ಚ — ರೂ. 1,000/–

15. ಕರ್ನಾಟಕ ಸಮಾಜವಾದಿ ವೇದಿಕೆ ಮಂಡ್ಯ ಜಿಲ್ಲಾ ಘಟಕದ 11 ಜನರಿಗೆ 'ಸಂವಾದ' ಮಾಸಪತ್ರಿಕೆಯ ವಾರ್ಷಿಕ ಚಂದಾ ಹಣವಾಗಿ ನೀಡಿದ ಸಹಾಯಧನ (11 ಜನರಿಗೆ ತಲಾ ರೂ.200/–ರಂತೆ) — ರೂ. 2,200/–

16. ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಬಾಲಕಿಯರಿಗೆ ಸ್ಕಾಲರ್‌ಷಿಪ್ ನೀಡುವ ಯೋಜನೆ ಬಗ್ಗೆ ಬಾಲಕಿಯರಿಗೆ ತಿಳಿಸಿ, ಒಟ್ಟು 69 ವಿದ್ಯಾರ್ಥಿನಿಯರಿಂದ ಆನ್‌ಲೈನ್ ಅರ್ಜಿ ಹಾಕಿಸಿದ ಚೈತ್ರಾಳಿಗೆ ನೀಡಿದ ಗೌರವಧನ — ರೂ. 1,000/–

17. ದಿನಾಂಕ 11–11–2020ರಂದು ಮಂಡ್ಯದ ಗಾಂಧಿಭವನದಲ್ಲಿ 'ಮೌಲಾನಾ ಆಜಾದ್ ಜಯಂತಿ' ಕಾರ್ಯಕ್ರಮ ಏರ್ಪಡಿಸಲಾಯಿತು. ಇದಕ್ಕಾಗಿ ಸ್ಥಳೀಯ ಮಿತ್ರರು ಮತ್ತು ಹಿತೈಷಿಗಳಿಂದ ರೂ. 6000/–ಗಳನ್ನು ಸಂಗ್ರಹಿಸಲಾಯಿತು. ಒಟ್ಟು ವೆಚ್ಚ ರೂ.8311/– ಆಗಿದ್ದು, ಒಟ್ಟು ವೆಚ್ಚವನ್ನು ಸರಿದೂಗಿಸಿಕೊಳ್ಳಲು ಕೇಂದ್ರ ವೇದಿಕೆಯಿಂದ ಪಡೆದುಕೊಳ್ಳಲಾದ ಮೊತ್ತ — ರೂ. 2315/–

18. ದಿನಾಂಕ 26–11–2020ರಂದು 'ಸಂವಿಧಾನ ದಿನ' ವನ್ನು ಮಂಡ್ಯದಲ್ಲಿ ಆಚರಿಸಲಾಯಿತು. ಇದಕ್ಕಾಗಿ ಸ್ಥಳೀಯ ಮಿತ್ರರು ಮತ್ತು ಹಿತೈಷಿಗಳಿಂದ ರೂ. 600/–ಗಳನ್ನು ಸಂಗ್ರಹಿಸಲಾಯಿತು. ಒಟ್ಟು ವೆಚ್ಚ ರೂ. 1710/– ಆಗಿದ್ದು, ಇದನ್ನು ಸರಿದೂಗಿಸಲು ಕೇಂದ್ರ ವೇದಿಕೆಯಿಂದ ಪಡೆದು ಕೊಳ್ಳಲಾದ ಮೊತ್ತ — ರೂ. 1,110/–

19. ಸಂವಿಧಾನ ಪೀಠಿಕೆ ಇರುವ 2000 ಕಾರ್ಡ್‌ಗಳ ಮುದ್ರಣ ವೆಚ್ಚ — ರೂ. 1,500/–
(ಮಂಡ್ಯ ಜಿಲ್ಲೆಯ ವಿವಿಧ ಕಡೆ ನಡೆದ ಸಭೆ, ಕಾರ್ಯಕ್ರಮಗಳಲ್ಲಿ 'ಸಂವಿಧಾನ ಪೀಠಿಕೆ' ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು)

20. ಸರ್ಕಾರಿ ಶಾಲೆ, ಸರ್ಕಾರಿ ಪಿಯು ಕಾಲೇಜಿನಲ್ಲಿ ಓದಿ, ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಬಾಲಕಿಯರಿಗೆ ವಾರ್ಷಿಕ ರೂ.24,000/– ಸ್ಕಾಲರ್‌ಷಿಪ್ ನೀಡುವ ಯೋಜನೆಯನ್ನು ಬಾಲಕಿ ಯರಿಗೆ ತಿಳಿಸಿ, ಅವರಿಂದ ಆನ್‌ಲೈನ್ ಅರ್ಜಿ ಹಾಕಿಸುವ ಸಂಬಂಧ ದಲ್ಲಿ ಕೆಲಸ ಮಾಡಿದ ಮಂಡ್ಯ ನಗರದ ಚೈತ್ರಾ (ಮಹಿಳಾ ಅಧ್ಯಯನದಲ್ಲಿ ಎಂ.ಎ. ಮುಗಿಸಿರುವ ಉತ್ಸಾಹಿ ಯುವತಿ) ಅವರಿಗೆ ನೀಡಿದ ಗೌರವಧನ. — ರೂ. 1,000/–

21. ಮಂಡ್ಯದಲ್ಲಿ ಯುವತಿಯರಿಗೆ ಮತ್ತು ಕಾಲೇಜ್ ವಿದ್ಯಾರ್ಥಿನಿಯರಿಗೆ ಸಮಾಜವಾದಿ ತತ್ವವನ್ನು ಮತ್ತು ಸಮಾಜವಾದಿ ವೇದಿಕೆಯನ್ನು ಪರಿಚಯಿಸುವ ಕಾರ್ಯಕ್ಕೆ ನವೆಂಬರ್ ತಿಂಗಳಲ್ಲಿ ನೇಮಕಗೊಂಡ ಬಿ.ಎಡ್. ವಿದ್ಯಾರ್ಥಿನಿ ಲತಾ ಅವರಿಗೆ ನೀಡಿದ ಗೌರವಧನ — ರೂ. 500/–

**ಒಟ್ಟು ರೂ. 45,615/–**

**2020ನೇ ವರ್ಷದಲ್ಲಿ**

| | |
|---|---|
| **ಒಟ್ಟು ಧನಸಹಾಯ ಸ್ವೀಕೃತಿ** | **ರೂ. 54,660/–** |
| **ಒಟ್ಟು ವೆಚ್ಚ** | **ರೂ. 45,615/–** |
| **ವರ್ಷ 2020ರ ಕೊನೆಯಲ್ಲಿ ಉಳಿಕೆ** | **ರೂ. 9,045/–** |


**ಸಂಪರ್ಕ**
**ಕರ್ನಾಟಕ ಸಮಾಜವಾದಿ ವೇದಿಕೆ**
ಎಸ್–6, ರಿವೆಂಡೆಲ್ ಅಪಾರ್ಟ್‌ಮೆಂಟ್
ಐಡಿಯಲ್ ಹೋಮ್ಸ್ ಬಡಾವಣೆ, ಆರ್.ಆರ್.ನಗರ, **ಬೆಂಗಳೂರು–560 098 (ಮೊಬೈಲ್: 94491–02294)**
Please visit : karnatakasocialistforum.in